**ದಿನಾಂಕಃ 19/12/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು:** ಆರೋಪಿತರ **ಪರ ಶ್ರೀ ಕೆ.ಆರ್.ವಿ ವಕೀಲರಿಂದಃ**

1. ಫ್ರಾಸಾ-1 ಸೂಳೆಕೋಟೆ ಗ್ರಾಮದ ವಾಸಿ. ಫ್ರಾಸಾ-1ರವರು ಶಿರಂಗಾಲ ಗ್ರಾಮ, ಸೋಮವಾರಪೇಟೆ ತಾಲ್ಲೂಕಿನವರು ಎಂದರೆ ಸರಿಯಲ್ಲ. ಫ್ರಾಸಾ-2 ಮತ್ತು ನಾವು ಒಟ್ಟಿಗೆ ಇದ್ದೇವೆ. ಆರೋಪಿತರ ಮತ್ತು ನಮ್ಮ ಮನೆಯ ನಡುವೆ ರಸ್ತೆ ಇದೆ. ನಮಗೂ ಮತ್ತು ಆರೋಪಿತರ ನಡುವೆಯೂ ಯಾವುದೇ ಸಿವಿಲ್ ವ್ಯಾಜ್ಯ ಇಲ್ಲ. ನಾನು ಈ ಘಟನೆಯ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಘಟನೆ ನಡೆದ 2 ದಿನಗಳ ನಂತರ ನಾನು ಹೇಳಿಕೆ ನೀಡಿದ್ದೇನೆ. ಅಂದರೆ ದಿಃ13/04/2017 ರಂದು ಹೇಳಿಕೆ ನೀಡಿದ್ದೇನೆ. ಆ ಹೇಳಿಕೆಯಲ್ಲಿ ನಮಗೂ ಮತ್ತು ಆರೋಪಿತರಿಗೂ ಸಿವಿಲ್ ವ್ಯಾಜ್ಯ ಇತ್ತು ಎಂದು ಹೇಳಿಕೆ ನೀಡಿಲ್ಲ.

2. ನಾನು ನನ್ನ ಹೇಳಿಕೆಯಲ್ಲಿ ಪಿರಿಯಾಪಟ್ಟಣ ಕೋರ್ಟಿನಲ್ಲಿ ಕೇಸು ನಡೆದು ತೀರ್ಪು ನಮ್ಮ ಪರ ಆಗಿರುತ್ತೆ ಎಂದು ಹೇಳಿಕೆ ನೀಡಿದ್ದೇನೆ. ನಾನು ನನ್ನ ಹೇಳಿಕೆಯಲ್ಲಿ ಆ ಜಾಗ ನಮ್ಮ ಪರವಾಗಿ ಆಗಿದೆ ಎಂದು ನುಡಿದಿದ್ದೇನೆ. ಸಿವಿಲ್ ವ್ಯಾಜ್ಯ ಆರೋಪಿತರ ಪರ ತೀರ್ಪಾಗಿದ್ದು, ಅದರ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ನಿವೇಶನದ ಸಂಬಂಧ ನಮಗೂ ಮತ್ತು ಆರೋಪಿತರಿಗೂ ಹಲವಾರು ಬಾರಿ ಗಲಾಟೆ ಆಗಿ ಪೊಲೀಸ್ ಠಾಣೆಯಲ್ಲಿ ರಾಜೀ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮತ್ತು ಫ್ರಾಸಾ-1, 2 ಮತ್ತು ರಾಮಚಂದ್ರ ರವರ ವಿರುದ್ಧ ದೂರನ್ನು ಸಲ್ಲಿಸಿದ್ದರು, ಅದು ಠಾಣೆಯಲ್ಲಿ ರಾಜೀಯಾಗಿದೆ ಎಂದರೆ ಸರಿಯಲ್ಲ. ಆರೋಪಿತರು ಬಂದ ಜೀಪ್ ಯಾರಿಗೆ ಸೇರಿದ್ದು ಎಂದು ನನಗೆ ಹೇಳಲು ಗೊತ್ತಿಲ್ಲ. ಗಲಾಟೆ ಕಾಲಕ್ಕೆ ಸ್ವಲ್ಪ ಜನ ಇದ್ದರು, ಅವರೆಲ್ಲರೂ ಆರೋಪಿತರ ಕಡೆಯವರಾಗಿದ್ದರು. ಘಟನಾ ಕಾಲಕ್ಕೆ ಇದ್ದ ಜನರು ಆರೋಪಿತರ ಮನೆಯವರೇ ಇದ್ದರು. ನಿವೇಶನಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಕೊಟ್ಟಿದ್ದೇನೆ, ಆದರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

3. ಗಲಾಟೆಯಾದ ನಂತರ ದಿಃ14/04/2017 ರಂದು ಪೊಲೀಸರು ಸ್ಥಳಕ್ಕೆ ಬಂದಿದ್ದರು. ಸ್ಥಳವನ್ನು ನಾನೇ ಪೊಲೀಸರಿಗೆ ತೋರಿಸಿರುತ್ತೇನೆ. ಸ್ಥಳ ಮಹಜರ್ ಗೆ ನಾನು ಮತ್ತು ಇತರರು ಸಹಿ ಮಾಡಿದೆವು. ಆ ಕಾಲಕ್ಕೆ ಒಂದು ದೊಣ್ಣೆ ಎರಡು ಕಲ್ಲುಗಳನ್ನು ಅಮಾನತ್ತು ಪಡಿಸಿಕೊಂಡರು. ಸ್ಥಳವನ್ನು ಮತ್ತು ಮುದ್ದೇಮಾಲುಗಳನ್ನು ನಾನೇ ತೋರಿಸಿರುತ್ತೇನೆ. ಪೊಲೀಸರು ಅಮಾನತ್ತು ಪಡಿಸಿಕೊಂಡರು. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಧರಿಸಿದ್ದ ನೈಟಿಯನ್ನು ಹಿಡಿದು ಎಳೆದಾಡಿ ಹರಿದು ಹಾಕಿ, ನನಗೆ ನಡುರಸ್ತೆಯಲ್ಲಿ ಮಾನಭಂಗ ಮಾಡಿರುತ್ತಾರೆ ಎಂದು ನುಡಿದಿಲ್ಲ. ಆದರೆ ನನ್ನ ಅತ್ತಿಗೆಯ ನೈಟಿಯನ್ನು ಹಿಡಿದು, ಎಳೆದಾಡಿ, ಹರಿದು ಹಾಕಿದರು ಎಂದು ಹೇಳಿದ್ದೇನೆ. ನಾನು ಇಂದು ಇವತ್ತೇ ಮೊದಲನೇ ಬಾರಿಗೆ ನ್ಯಾಯಾಲಯಕ್ಕೆ ಬಂದಿರುತ್ತೇನೆ. ಸಾಕ್ಷಿ ಸ್ವತಃ ಮುಂದುವರೆದು ಮೊದಲಿದ್ದ ಪಿ.ಪಿ ರವರು ವಿಚಾರಣೆ ಮಾಡಿದಾಗ ನಾನು ನ್ಯಾಯಾಲಯಕ್ಕೆ ಬಂದಿದ್ದೆ ಎಂದು ನುಡಿಯುತ್ತಾರೆ.

4. ಹೊಗೆಸೊಪ್ಪು ಬೇಯಿಸಲು ಮು.ಮಾ.1 ರ ರೀತಿಯ ದೊಣ್ಣೆಯನ್ನು ಉಪಯೋಗಿಸುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮನೆಯ ಮುಂದಿನ ರಸ್ತೆಯಲ್ಲಿ ರಸ್ತೆ ಕಾರ್ಯಗಳು ನಡೆಯುತ್ತಿರುವ ಕಾರಣ ಮು.ಮಾ.3 ರೀತಿಯ ಕಲ್ಲುಗಳು ಇರುತ್ತವೆ ಎಂದರೆ ಸರಿಯಲ್ಲ. ಪ್ರಾಸಾ-1, 2 ಮತ್ತು ಚಾಸಾ-3 ರವರನ್ನು ನಾನೇ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಅವರು ಆಸ್ಪತ್ರೆಯಲ್ಲಿ 4-5 ದಿನ ಒಳರೋಗಿಯಾಗಿದ್ದರು. ನಮ್ಮ ಮನೆಯಲ್ಲಿ ಘಟನಾ ದಿನ ಒಟ್ಟು 12 ಜನ ಇದ್ದೆವು. ಪೊಲೀಸರು ಆಸ್ಪತ್ರೆಗೆ ಬಂದು ನನ್ನ ಮತ್ತು ಪ್ರಾಸಾ-1, 2 ಮತ್ತು ಚಾಸಾ-3 ರವರ ಹೇಳಿಕೆಗಳನ್ನು ಪಡೆದುಕೊಂಡರು. ನಾವು ಯಾರೂ ದೂರನ್ನು ಕೊಟ್ಟಿಲ್ಲ.

5. ಘಟನಾ ಸ್ಥಳದ ಚಕ್ಕುಬಂದಿ ಪೂರ್ವಕ್ಕೆ ಚನ್ನಬಸವಯ್ಯ ಕಡ್ಲೆಬಸಪ್ಪರವರ ಮನೆ, ಪಶ್ಚಿಮಕ್ಕೆ ನಮ್ಮ ಮನೆ, ಉತ್ತರಕ್ಕೆ ರಸ್ತೆ ಮತ್ತು ಪುಟ್ಟಸ್ವಾಮಿಯವರ ಮನೆ, ದಕ್ಷಿಣಕ್ಕೆ ಗೋವಿಂದಪ್ಪರವರ ಜಾಗ. ಪೊಲೀಸರು ನನ್ನ ಸಮಕ್ಷಮ ಒಂದೇ ಮಹಜರ್ ಮಾಡಿಕೊಂಡರು. ಜಾಗದ ವಿಷಯಕ್ಕೆ ಈ ಘಟನೆ ನಡೆದಿರುತ್ತದೆ. ಮು.ಮಾ.1 ರಿಂದ

4 ನ್ನು ಇದೇ ಪ್ರಥಮ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾರ ಮಾನಭಂಗವನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಘಟನೆ ಕಾಲಕ್ಕೆ ನಾನು ನನ್ನ ಮನೆಯಲ್ಲಿದ್ದೆ. ನಮ್ಮ ಮತ್ತು ಆರೋಪಿತರ ನಡುವೆ ಸಿವಿಲ್ ವ್ಯಾಜ್ಯ ಇದ್ದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಜೇಪಿನಲ್ಲಿ ಬಂದಿಲ್ಲ, ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಫ್ರಾಸಾ–1, 2 ರವರ ಕೊಟ್ಟ ಮಾಹಿತಿ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಫ್ರಾಸಾ–1 ಮತ್ತು 2 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಘಟನಾ ದಿನ ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**